(MR. SPEAKER)

me. I want the rules to be amended. Till then the existing rules have to be enforced. I have not allowed anybody without written permission. If I do it now, the Members will think otherwise and may ask, why this special kind of treatment for one Member.

Next question.

Sri P. VENKATAGIRIYAPPA (Kolar).—I have been authorised to put the question.

Mr. SPEAKER.—Yes, Sri P. Venkatagiriyappa can put it.

Nationalisation of Bus Service in Kolar District

*Q.—749. Sri P. VENKATAGIRIYAPPA [on behalf of SRI T. K. GANGI REDDY (Chintamani)].—

Will the Minister for Transport and Tourism be pleased to state:—

(*a*) whether the Government has come to any decision regarding nationalisation of Bus Services in Kolar District ;

(*b*) if so, whether any time limit has been fixed ?

A.—Sri H. C. BORAIAH (Deputy Minister for Transport and Tourism).—

(*a*) No. A draft scheme published by the Mysore State Road Transport Corporation proposing nationalisation of bus routes in Kolar District is now before Government for approval under Section 68-D of the Motor Vehicles Act, 1939.

(*b*) In view of reply to clause (*a*) of the question, this does not arise.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ರಾಷ್ಟ್ರೀಕರಣ ಯೋಜನೆ ತಯಾರಾಗಿದೆಯೆಂದು ಹೇಳಿದ್ದೀರಿ, ಅದು ತಯಾರಾಗಿ ಎಷ್ಟು ವರ್ಷಗಳಾಯಿತು, ತಯಾರಾದ ಯೋಜನೆಗಳಿಗನುಗುಣವಾಗಿ ವರ್ಕ್‌ಷಾಪ್ ಕಟ್ಟಲಿಕ್ಕೆ ಇದುವರೆಗೆ ಎಷ್ಟು ಖರ್ಚಾಗಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಕರಡು ಯೋಜನೆಯನ್ನು ಮೈಸೂರು ರಸ್ತೆಸಾರಿಗೆ ಸಂಸ್ಥೆಯವರು ತಯಾರುಮಾಡಿ, ಅದರ ಬಗ್ಗೆ ತಕರಾರುಗಳನ್ನು ಕರೆದಿದ್ದರು. ಆ ಬಗ್ಗೆ ತೀರ್ಮಾನವಾಗಬೇಕಾಗಿದೆ: 29-7-1967ರಲ್ಲಿ ಆ ಬಗ್ಗೆ ಹಿಯರಿಂಗ್ ಇತ್ತು. ಆದರೆ ಕಾರಣಾಂತರಗಳಿಂದ ಅದು ಮುಂದಕ್ಕೆ ಹೋಯಿತು.

ಶ್ರೀ ಪಿ. ವೆಂಕಟಗಿರಿಯಪ್ಪ.—ತಕರಾರುಗಳನ್ನು ಯಾವಾಗ ಕರೆಯಲಾಗಿತ್ತು ?

ಶ್ರೀ ಎಚ್. ಸಿ. ಬೋರಯ್ಯ.—68 (ಡಿ) ಮೋಟಾರ್ ವೆಹಿಕಲ್ಸ್ ಆಕ್ಟ್ 1939ರ ಪ್ರಕಾರ ಮೈಸೂರು ಗೆಜೆಟ್ಟಿನಲ್ಲಿ 28-9-1964ರಲ್ಲಿ ಅದನ್ನು ಪ್ರಕಟಪಡಿಸಲಾಗಿತ್ತು.

Sri H. C. LINGA REDDY.—Is it true that this nationalisation of bus transport in Kolar district is being postponed every year and the matter is hanging fire for the last three years at the instance of the bus operators ?

ಶ್ರೀ ಎಚ್. ಸಿ. ಬೋರಯ್ಯ.—ಈಗ ಪ್ರಕಟಣೆ ಮಾಡಿರತಕ್ಕಂಥಾದ್ದು ಕರಡು ಯೋಜನೆ ಎಂದು ಹೇಳಿದೆ. ಅದನ್ನು 1964 ರಲ್ಲಿ ಪ್ರಕಟಿಸಿದೆ. ಈ ಕರಡು ಯೋಜನೆಗೆ ತಕರಾರು ಬಂದಿವೆ. 29-7-1967 ನೇ ದಿನ ಹಿಯರಿಂಗ್ ಇತ್ತು. ಅಂದು ಇದು ಇತ್ಯರ್ಥವಾಗಬೇಕಾಗಿತ್ತು. ಆದರೆ ಕಾರಣಾಂತರದಿಂದ ಅದು ಮುಂದೆಹೋಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಯೋಜನೆಗೆ ಅನುಸಾರವಾಗಿ ಡಿವಿಜನಲ್ ವರ್ಕ್‌ಷಾಪ್ ಕಟ್ಟಿದ್ದೀರಿ. ಅದಕ್ಕೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಅದು ಕರಡು ಯೋಜನೆ. ಅದರಮೇಲೆ ಬಂದಿರತಕ್ಕ ತಕರಾರುಗಳನ್ನು ಪರಿಶೀಲಿಸಿ ಮಾನ್ಯ ಮುಖ್ಯಮಂತ್ರಿಗಳು ಒಂದು ತೀರ್ಮಾನ ಕೊಡಬೇಕಾಗಿದೆ. ಅವರು ತೀರ್ಮಾನಕೊಟ್ಟನಂತರ ಫೈನಲ್ ನೋಟಿಫಿಕೇಷನ್ ಹೊರಡಿಸಬೇಕಾಗುತ್ತದೆ. ಅದೆಲ್ಲಾ ಆದನಂತರ ತಾನೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪದೇ ಪದೇ ಬಂದು ಬಸ್ ಮಾಲೀಕರು ರಿಪ್ರೆಜೆಂಟೇಷನ್ ಕೊಟ್ಟದ್ದಕ್ಕೆ ಮುಂದುವರಿಸುತ್ತೀರಿ. ಆದುದರಿಂದ ಖಚಿತವಾಗಿ ಎಷ್ಟುದಿವಸಗಳಲ್ಲಿ ಈ ಬಸ್ ರೂಟನ್ನು ನ್ಯಾಷನಲೈಸ್ ಮಾಡುತ್ತೀರಿ ಎನ್ನುವುದನ್ನು ತಿಳಿಸಿಲು ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಷ್ಟೇಕಾಲ ಎಂದು ತಿಳಿಸಲು ಆಗುವುದಿಲ್ಲ. ಕಾನೂನು ಪ್ರಕಾರ ಅಬ್ಜೆಕ್ಷನ್ಸ್ ಹಿಯರ್ ಮಾಡಲೇಬೇಕು ಮತ್ತು ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ಕೊಡಲೇಬೇಕು. ಆದುದರಿಂದ ಇದು ತಡವಾದುದು ನಮ್ಮಿಂದ ಅಲ್ಲ. ಯಾರು ಯಾರು ತಕರಾರು ಮಾಡಿದ್ದಾರೆಯೋ ಅವರ ತಕರಾರು ಕೇಳಬೇಕಾಗುತ್ತದೆ. ಅದರಮೇಲೆ ತೀರ್ಮಾನ ಕೊಡಬೇಕಾಗಿದೆ. ಈಗಾಗಲೇ ಹೇಳಿದೆ 29-7-1967 ನೇ ದಿನ ಹಿಯರಿಂಗ್ ಇತ್ತು. ಆದರೆ ಅದನ್ನು ಮುಂದೆ ಹಾಕತಕ್ಕಂಥ ಸಂದರ್ಭ ಬಂತು. ಮುಖ್ಯಮಂತ್ರಿಗಳು ದಿಲ್ಲಿಗೆ ಹೋಗುತ್ತಾರೆಂದು ತಕರಾರು ಮಾಡಿದವರು ಬರಲಿಲ್ಲ ಎಂದು ಅವರು ಹೇಳಿದರು.

ಶ್ರೀ ಎನ್. ಗೋಪಾಲಗೌಡ.—ಈ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗಿರತಕಂಥ ಮಾರ್ಗಗಳು ಎಷ್ಟು ಉಳಿದಿವೆ ? 1964 ರಿಂದ ಉಳಿದಿರತಕ್ಕಂಥ ರೂಟ್‌ಗಳನ್ನು ಸರಕಾರ ತೆಗೆದುಕೊಳ್ಳದೇ ಇರತಕ್ಕಂಥಾದ್ದಕ್ಕೆ ಬೇರೆ ಏನು ಅಭ್ಯಂತರ ಇದೆ ?

ಶ್ರೀ ಎಚ್. ಸಿ. ಬೋರಯ್ಯ.—ಕೋಲಾರ ಜಿಲ್ಲೆಯಲ್ಲಿ 87 ರೂಟ್ಸ್ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿ ಅದನ್ನು ಪ್ರಕಟಿಸಿದೆ. ಯಾವ ರೂಟ್ ಉಳಿದಿವೆ ಅದನ್ನು ಯೋಚನೆ ಮಾಡಬೇಕಾಗಿದೆ. ಆ ವಿವರ ಈಗ ಇಲ್ಲಿ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—1964 ರಲ್ಲಿ ಕರಡುಯೋಜನೆ ಪ್ರಕಟವಾಯಿತು. ಈ ಪ್ರಕಾರ ಕಳೆದ 3 ವರ್ಷಗಳಲ್ಲಿ ಅಬ್‌ಜೆಕ್ಷನ್ ಹಿಯರಿಂಗ್ ಮಾಡುವುದಕ್ಕೆ ಯಾವ ತಾರೀಖು ಮೊದಲನೇ ಸಲ ನಿಗದಿ ಮಾಡಿದ್ದಿರಿ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ನನ್ನ ಮುಂದೆ ಈಗ ಇಲ್ಲ.

Sri M. RAMAPPA.—May I know why this matter has taken three ong years ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತಿಯೊಂದಕ್ಕೆ ಕಾರಣ ಕೊಡಬೇಕು ಅಂದರೆ ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಪ್ರಶ್ನೆ ಹಾಕಿದರೆ ವಿವರ ಒದಗಿಸಬಹುದು.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡುವುದಕ್ಕೆ ಅತಂಕವಾಗಿ ಎಷ್ಟು ಅರ್ಜಿಗಳನ್ನು ಖಾಸಗಿ ಬಸ್ಸಿನವರು ಹಾಕಿದ್ದಾರೆ ? ಈ ಅರ್ಜಿಗಳನ್ನು ಪರಿಶೀಲಿಸುವುದಕ್ಕೆ ಅವರಕಷ್ಟ ಕೇಳುವುದಕ್ಕೆ ಎಷ್ಟುಸಲ ಹಿಯರಿಂಗ್ ಮಾಡಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ನನ್ನ ಮುಂದೆ ಈಗ ಇಲ್ಲ. ಬೇರೆ ಪ್ರಶ್ನೆ ಹಾಕಿದರೆ ವಿವರ ಒದಗಿಸುತ್ತೇನೆ. ಅರ್ಜಿ ಹಾಕಿದವರು ಎಷ್ಟು ಜನ ಇದ್ದಾರೆ ಎಂಬ ವಿವರ ಒದಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಈಗ ನಡೆಯುತ್ತಿರುವ ರೀತಿಯನ್ನು ನೋಡಿದರೆ ರಾಷ್ಟ್ರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎಚ್. ಸಿ. ಬೋರಯ್ಯ.—ಹಾಗೆ ತಿಳಿದುಕೊಳ್ಳುವುದು ಸರಿಯಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರದ ಕೆಲವು ಮಾರ್ಗಗಳಲ್ಲಿ ರಾಷ್ಟ್ರೀಕರಣ ಮಾಡ ರಾಗಿದೆ ಎಂದು ಹೇಳಿದರು. ಅದರಲ್ಲಿ ಏನಾದರೂ ಆದಾಯವಿದೆಯೋ ಅಥವಾ ಒಳವ್ಯಾಪಾರ ನಡೆದಿದೆಯೋ, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—87 ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲು ಉದ್ಯುಕ್ತ ರಾಗಿದ್ದೇವೆ ಅದರಲ್ಲಿ ಒಳ ವ್ಯಾಪಾರ, ಒಳ ವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

Sri M. RAMAPPA.—May I know whether it is due to the delaying tactics of private bus owners or due to financial stringency of the Government ?

ಶ್ರೀ ಎಚ್. ಸಿ. ಬೋರಯ್ಯ.—ಇಂಥದೇ ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ. ಖಾಸಗಿ ಮಾಲೀಕರುಗಳಿಂದ ಬಹಳ ತಕರಾರುಗಳು ಬಂದಿವೆ. ಅದನ್ನು ಸರ್ಕಾರ ಗಮನಿಸಬೇಕಾಗಿದೆ.

ಶ್ರೀ ಎ. ಆರ್. ಬದರೀನಾರಾಯಣ್.—ರಾಷ್ಟ್ರೀಕರಣ ಮಾಡುವುದಕ್ಕೆ ಎಷ್ಟು ದಿನ ಬೇಕಾಗ ಬಹುದು ಎನ್ನುವ ಅಂದಾಜು ಇದೆಯೇ ? ಅಂದಾಜು ಇದ್ದರೆ ಎಷ್ಟು ವರ್ಷದಲ್ಲಿ ರಾಷ್ಟ್ರೀಕರಣ ಮಾಡುತ್ತೀರಿ ?

Mr. SPEAKER.—This is limited to Kolar.

Sri DIGAMBAR RAO BALWANT RAO.—Can you difinitely say when nationalisation will take place ?

ಶ್ರೀ ಎಚ್. ಸಿ. ಬೋರಯ್ಯ.—ಖಚಿತವಾಗಿ ಇಷ್ಟು ದಿನಗಳಲ್ಲಿ ಮಾಡುತ್ತೇವೆಂದು ಹೇಳು ವುದಕ್ಕಾಗುವುದಿಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿಯೇ ಪೂರ್ತಿಸಬೇಕಾಗಿತ್ತು ಇನ್ನೂ ಆಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡದೆ ಸರ್ಕಾರದವರು ಬಸ್ಸುಗಳನ್ನು ಓಡಿಸುತ್ತಿರುವುದರಿಂದ ಅನೇಕ ಮಾರ್ಗಗಳಲ್ಲಿ ಲಕ್ಷಾಂತರ ರೂಪಾಯಿ ಲುಕ್ಸಾನಾಗಿ ರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅನೇಕ ಲಕ್ಷ ಲುಕ್ಸಾನಾಗಿದೆ ಎಂದು ಹೇಳುವುದಕ್ಕೆ ಸಿದ್ಧ ನಾಗಿಲ್ಲ. ಆದರೆ ಲುಕ್ಸಾನಾಗುತ್ತಿದೆ ಎಂದು ಮಾತ್ರ ಹೇಳಬಹುದು.

ಶ್ರೀ ಎನ್. ಚಿಕ್ಕೇಗೌಡ.—ಅನೇಕ ತಕರಾರುಗಳು ಬಂದಿರುವುದರಿಂದ ನಿಧಾನವಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ರಾಷ್ಟ್ರೀಕರಣ ಮಾಡುವಾಗ ಸಾಮಾನ್ಯವಾಗಿ ತಕರಾರುಗಳು ಬಂದೇ ಬರುತ್ತದೆ, ಬಂದಿರುವ ತಕರಾರುಗಳನ್ನು ಪರಿಶೀಲಿಸಿ ಸರ್ಕಾರ ಜಾಗ್ರತೆ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—28-7-1967ಕ್ಕೆ ಹಿಯರಿಂಗ್ ಇತ್ತು. ಬೇಗ ಕಾರ್ಯಗತ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಬಿ. ಪಿ. ಗಂಗಾಧರ್.—ಈಗ ಸರ್ಕಾರದ ಮುಂದೆ ತಕರಾರುಗಳನ್ನು ಹಾಕಿರುವವರು ಕಾಂಗ್ರೆಸ್ಸಿನವರಾಗಿರುತ್ತಾರೆ. ಅವರು ತಮಗೆ ಚುನಾವಣೆಗಳಲ್ಲಿ ಸಹಾಯ ಸಹಕಾರಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ರೀತಿ ನಿಧಾನವಾಗುತ್ತಿದೆ ಎಂದು ನಮಗೆ ತಿಳಿದು ಬಂದಿದೆ. ಇದು ಸರಿಯೇ, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅದನ್ನು ನಾನು ಪ್ರತಿಭಟಿಸುತ್ತೇನೆ, ಸ್ವಾಮಿ.

Sri AZEEZ SAIT.—When there is the Minister for Transport may I know why the matter should be dealt by the Chief Minister ?

Sri H. C. BORIAH.—Under rule 8 of the Rules of the State Road Transport Undertakings, 1963, the objections will have to be heard by the Chief Minister. The Chief Minister is the competent authority to hear objections.